**ಓ.ಎಸ್. ನಂಃ 25/2019**
**ಡಿಡಬ್ಲ್ಯೂಃ 1**

**ದಿನಾಂಕಃ 20-09-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ಶ್ರೀ ಎನ್‌ಆರ್ ಕೆ ವಕೀಲರಿಂದಃ**

ವಾದಿಯರು ನನ್ನ ದೊಡ್ಡಮ್ಮ ಹಾಗೂ ದೊಡ್ಡಪ್ಪನ ಮಗ ಆಗಿರುತ್ತಾರೆ. ನನ್ನ ತಂದೆಯ ಹೆಸರು ಮಹ್ಮದ್ ಗೌಸುದ್ದಿನ್ ಎಂದು ಇರುತ್ತದೆ. ಮೊಹ್ಮದ್ ಯಾಕುಬ್ ಸಾಬ್ ರವರು ಮರಣಹೊಂದಿರುತ್ತಾರೆ. ಅವರಿಗೆ ಮರೆಂಬಿ ಮತ್ತು ಗೋರಿಬಿ ಎಂಬ ಇಬ್ಬರು ಹೆಂಡತಿಯರಿದ್ದಾರೆ ಸರಿಯಲ್ಲ. ಸಾಕ್ಷಿಯು ಮಾಲಂಬೀ ಎಂಬುವವರು ಮಾತ್ರ ಯಾಕುಬ್ ಸಾಬ್ ರವರ ಹೆಂಡತಿಯಾಗಿರುತ್ತಾರೆ ಎಂದು ನುಡಿಯುತ್ತಾರೆ. ಗೋರಿಬಿ ರವರ ಯಾಕುಬ ಸಾಬ ರವರ 2ನೇ ಹೆಂಡತಿಯಾಗಿದ್ದರೂ ಸಹ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

2. ಮಾರಂಬೀ ರವರು ನನ್ನ ಅಜ್ಜಿ ಆಗಿರುತ್ತಾರೆ. ಅವರಿಗೆ ಮೊಹ್ಮದ್ ಗೌಸುದ್ದೀನ್ ಹಾಗೂ ಗುಲಾಮ್ ಜಿಲಾನಿ ರವರು ಮಕ್ಕಳಾಗಿರುತ್ತಾರೆ ಎಂದರೆ ಸರಿ. ಅಪ್ಸರ್ ಮಿಯಾ ರವರು ಗೋರಿಬಿ ರವರು ಮಗ ಆಗಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ, ಆತ ಗೋರಿಬಿ ರವರ ಗಂಡ ಆಗಿರುತ್ತಾರೆ ಎಂದು ನುಡಿಯುತ್ತಾರೆ. 1ನೇ ವಾದಿ ಸದರಿ ಅಪ್ಸರ್ ಮಿಯಾ ರವರ 2ನೇ ಹೆಂಡತಿಯಾಗಿರುತ್ತಾರೆ ಎಂದರೆ ಸರಿ. ಅಪ್ಸರ್ ಮಿಯಾ ರವರ ಮೊದಲ ಹೆಂಡತಿ ಹೆಸರು ಗೋರಿಬಿ ಎಂದು ಇರುತ್ತದೆ ಎಂದರೆ ಸರಿ.

3. ದಾವಾ ಆಸ್ತಿಗಳು ನಮ್ಮ ಮತ್ತು ವಾದಿಯರ ಹಿರಿಯರ ಆಸ್ತಿಗಳು ಆಗಿರುತ್ತವೆ ಎಂದರೆ ಸರಿಯಲ್ಲ. ದಾವಾ ಅಸ್ತಿಗಳು ಮೂಲತಃ ಮೊಹ್ಮದ್ ಯಾಕುಬ್ ಸಾಬ್ ರವರಿಗೆ ಸೇರಿದ್ದಾಗಿದ್ದವು ಎಂದರೆ ಸರಿ. ಯಾಕುಬ್ ಸಾಬ್ ರವರು ಮರಣಹೊಂದಿದ ನಂತರ ನಿಮ್ಮ ತಂದೆ ಹಾಗೂ ಅಪ್ಸರ್ ಮಿಯಾ ರವರು ದಾವಾ ಮನೆಗಳಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿಯು ಸರಿಯಲ್ಲ, ಅಪ್ಸರ್ ಮಿಯಾ ರವರು ಪ್ರತ್ಯೇಕವಾಗಿ ವಾಸವಾಗಿದ್ದರು ಎಂದು ನುಡಿಯುತ್ತಾರೆ. ನಾನು ಸುಳ್ಳು ಸಾಕ್ಷ

ನುಡಿಯುತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಿಮಗೂ ಮತ್ತು ವಾದಿಯರಿಗೂ ಸಮಾನ ಹಕ್ಕು ಇರುತ್ತದೆ ಎಂದರೆ ಸಾಕ್ಷಿಯು ಸಮಾನ ಹಕ್ಕು ಇತ್ತು ಆದರೆ ನಂತರ ಪ್ರತ್ಯೇಕವಾಗಿರುತ್ತೇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಯಾವುದೇ ವಿಭಾಗವಾಗದಿದ್ದರೂ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಯಾವಾಗ ವಿಭಾಗ ಮಾಡಿಕೊಂಡಿದ್ದೀರಿ ಎಂದರೆ ಸಾಕ್ಷಿಯು ರಂಜಾನ್ ಹಬ್ಬದ ಸಮಯದಲ್ಲಿ ನನ್ನ ತಾತ ನನ್ನ ತಂದೆಗೆ ಆಸ್ತಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. 1988ರ ರಂಜಾನ್ ಹಬ್ಬದ ದಿನದಂದು ತಮಗೆ ಅಸ್ತಿ ನೀಡಿರುತ್ತಾರೆ ಎಂದು ನಮಗೆ ನನ್ನ ತಂದೆ ತಿಳಿಸಿದ್ದರು. ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

4. ಯಾಕುಬ್ ಸಾಬ್ ರವರಿಗೆ ಮೂರು ಜನ ಹೆಣ್ಣು ಮಕ್ಕಳು ಇದ್ದಾರೆ ಎಂದು ಪ್ರಮಾಣ ಪತ್ರದಲ್ಲಿ ಸುಳ್ಳು ಅಂಶ ಬರೆಸಿದ್ದೇನೆಂದರೆ ಸರಿಯಲ್ಲ. ನನ್ನ ತಂದೆ, ಆತನ ತಂಗಿಯಂದಿರು ಹಾಗೂ ಅಣ್ಣ-ತಮ್ಮಂದಿರು ಮತ್ತು ಶಫೀ ನೆಸ್ದಾರ ಎಂಬುವವರ ಹಾಗೂ ಇತರ ಎಲ್ಲರ ಸಮಕ್ಷಮ ನನ್ನ ತಾತ ನನ್ನ ತಂದೆಗೆ ಆಸ್ತಿ ನೀಡಿರುತ್ತಾರೆ. ನನ್ನ ತಾತ 3-1-79ರ ಮನೆಯನ್ನು ನನ್ನ ತಂದೆಗೆ ನೀಡಿರುತ್ತಾರೆ. ವಾದಿಯರಿಗೆ ಯಾವ ಆಸ್ತಿ ನೀಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಾತ ಅವರಿಗೆ ಆಸ್ತಿ ನೀಡಿಲ್ಲ ಎಂದು ನುಡಿಯುತ್ತಾರೆ. ನನ್ನ ತಾತ ಮೌಖಿಕ ದಾನದ ಮೂಲಕ ನನ್ನ ತಂದೆಗೆ ಆಸ್ತಿ ನೀಡಿರುತ್ತಾರೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯರಿಗೆ ಪಾಲು ನೀಡಬಾರದೆಂಬ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ** ಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ